KACD220019132019

Presented on : 30-10-2019
Registered on : 30-10-2019
Decided on : 27-05-2026
Duration : 27D-06M-06Y

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಳ್ಳಕೆರೆ.

ಉಪಸ್ಥಿತರುಃ ಶ್ರೀಮತಿ ಹೇಮಾ ಹೆಚ್.ಆರ್.,
ಬಿ.ಎ. ಎಲ್. ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ದಿನಾಂಕ 27 ನೇ ಮೇ 2026

**ಸಿ.ಸಿ.ನಂ.977/2019**

ಪಿರ್ಯಾದುದಾರರು:- ಚಳ್ಳಕೆರೆ ಪೊಲೀಸ್

(ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ -

ಆರೋಪಿತರು : 1) ಸೊರಟೂರ್ ಹೆಚ್.ಜಿ. @ ಹೆಗ್ಗಪ್ಪ ಸೊರಟೂರ್ ಬಿನ್ ಗುಡದಪ್ಪ, ಸು.೩೪ ವರ್ಷ, ತಿಮ್ಮಾಪುರ ಗ್ರಾಮ, ಗದಗ ತಾಲ್ಲೂಕು ಮತ್ತು ಜಿಲ್ಲೆ.

(ಆರೋಪಿ ಪರ: ಬಿ.ಸಣ್ಣ ಓಬಯ್ಯ, ವಕೀಲರು)

| | |
|---|---|
| ಅಪರಾಧ ಜರುಗಿದ ದಿನಾಂಕ | 20.06.2019 |
| ಅಪರಾಧವನ್ನು ವರದಿ ಮಾಡಿದ ದಿನಾಂಕ | 20.06.2019 |
| ಫಿರ್ಯಾದುದಾರರ ಹೆಸರು | ಅಂಬುಜಮ್ಮ |
| ವಿಚಾರಣೆ ಪ್ರಾರಂಭವಾದ ದಿನಾಂಕ | 05.07.2025 |
| ವಿಚಾರಣೆ ಮುಕ್ತಾಯವಾದ ದಿನಾಂಕ | 27.09.2025 |
| ಆಪಾಧನೆಗಳು | ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 338 |
| ನ್ಯಾಯಾಧೀಶರ ಅಭಿಪ್ರಾಯ | ನಿರ್ದೋಷಿ ಎಂದು ಪರಿಗಣಿಸಲಾಗಿದೆ |
| ಫಿರ್ಯಾದುದಾರರನ್ನು ಪ್ರತಿನಿಧಿಸುವವರು | ಸಹಾಯಕ ಸರ್ಕಾರಿ ಅಭಿಯೋಜಕರು |

ಆರೋಪಿತರ ಪರ ವಕೀಲರು ಶ್ರೀ ಬಿ. ಸಣ್ಣಓಬಯ್ಯ, ವಕೀಲರು

## ತೀರ್ಪು

ಚಳ್ಳಕೆರೆ ಪೊಲೀಸ್ ಠಾಣೆಯ ಆರಕ್ಷಕ ವೃತ್ತನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ ಕಲಂ ೨೭೯ ಮತ್ತು ೩೩೮ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ–

2. ದಿನಾಂಕ: ೨೦.೦೬.೨೦೧೯ ರಂದು ಬೆಳಿಗ್ಗೆ ೧೧.೪೫ ಗಂಟೆ ಸಮಯದಲ್ಲಿ, ಚಳ್ಳಕೆರೆ ಪಟ್ಟಣದ ಬೆಂಗಳೂರು ರಸ್ತೆಯ ಜಾಮಿಯಾ ಕಾಂಪ್ಲೆಕ್ಸ್ ಮುಂಭಾಗ ಚಾಸಾ.೧ ನಡೆದುಕೊಂಡು ಬಂದು ಹಿರಿಯೂರು ಕಡೆಯಿಂದ ಚಳ್ಳಕೆರೆ ಕಡೆಗೆ ಹಾದುಹೋಗಿರುವ ಎನ್.ಹೆಚ್.೧೫೦(ಎ) ರಸ್ತೆಯನ್ನು ದಾಟುತ್ತಿದ್ದಾಗ, ಆರೋಪಿಯು ಕೆಎ.೩೪/ಎಫ್.೧೩೦೦ ನೇ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಹಿರಿಯೂರು ಕಡೆಯಿಂದ ಚಳ್ಳಕೆರೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಚಾಸಾ.೧ ರವರಿಗೆ ಡಿಕ್ಕಿಪಡಿಸಿರುತ್ತಾರೆ. ಇದರಿಂದ ಚಾಸಾ.೧ ರವರು ರಸ್ತೆಯ ಮೇಲೆ ಬಿದ್ದು, ಅವರ ಬಾಯಿಗೆ, ತುಟಿಗೆ, ಹಲ್ಲಿಗೆ, ಎಡಭುಜದ ಹತ್ತಿರ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆದ್ದರಿಂದ, ಆರೋಪಿಯು ಭಾರತ ದಂಡ ಸಂಹಿತೆ ಕಲಂ ೨೭೯ ಮತ್ತು ೩೩೮ ರಡಿಯಲ್ಲಿ ಅಪರಾಧವೆಸಗಿರುತ್ತಾನೆ.

3. ದಿನಾಂಕ:೨೦.೦೬.೨೦೧೯ ರಂದು ಚಾಸಾ.೧ ರವರು ಚಾ.ಸಾ.೧೧ ರವರ ಮುಂದೆ ದೂರನ್ನು ನೀಡಿರುತ್ತಾರೆ. ಚಾ.ಸಾ.೧೧ ರವರು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ:೨೦೦/೨೦೧೯ ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ಅಧಿಕಾರವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತಾರೆ. ತನಿಖಾಧಿಕಾರಿಗಳು ಸದರಿ ದೂರಿನ ಅನ್ವಯ ತನಿಖಾ ಕಾರ್ಯ ಪೂರ್ಣಗೊಳಿಸಿ, ಆರೋಪಿಯ ವಿರುದ್ದ ಮೇಲೆ ತಿಳಿಸಿದ ಅಪರಾಧಗಳಿಗೆ ನ್ಯಾಯಾಲಯಕ್ಕೆ ದೋಷಾರೋಪಣ

ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಸದರಿ ಅಪರಾಧಗಳಿಗೆ ಸಂಜ್ಞೆಯತೆಯನ್ನು ತೆಗೆದುಕೊಂಡಿದೆ.

4. ಆರೋಪಿಯು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನು ಅರ್ಜಿಯನ್ನು ಸಲ್ಲಿಸಿ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ ೨೦೭ ರಂತೆ ದೋಷಾರೋಪಣ ಪ್ರತಿಯನ್ನು ಆರೋಪಿಗೆ ನೀಡಲಾಗಿದೆ. ನಂತರ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿ ಆರೋಪಿ ತಾನು ಯಾವುದೇ ತಪ್ಪು ಮಾಡಿರುವುದಿಲ್ಲ, ಪ್ರಕರಣದಲ್ಲಿ ವಿಚಾರಣೆಯಾಗಬೇಕೆಂದು ಕೇಳಿಕೊಂಡ ಮೇರೆಗೆ ಅಭಿಯೋಜನಾ ಪಕ್ಷದ ಪರವಾಗಿ ಸಾಕ್ಷಿಗಳ ವಿಚಾರಣೆ ಮಾಡಲಾಗಿರುತ್ತದೆ.

5. ಅಭಿಯೋಜನೆಯ ಪಕ್ಷದವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಲು ತನ್ನ ಪರವಾಗಿ ೦೫ ಜನ ಸಾಕ್ಷಿದಾರರನ್ನು ಪ್ರಾಸಾ–೧ ರಿಂದ ೫ ಎಂದು ತಮ್ಮ ಪರ ವಿಚಾರಣೆ ಮಾಡಿಕೊಂಡಿದ್ದು, ೧೦ ದಾಖಲೆಗಳನ್ನು ನಿಪಿ–೧ ರಿಂದ ೧೦ ಎಂದು ತಮ್ಮ ಪರ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ಆರೋಪಿಗೆ ವ್ಯತಿರಿಕ್ತವಾದ ಸಾಕ್ಷ್ಯಗಳು ಇರುವ ಕಾರಣ, ದಂ.ಪ್ರ.ಸಂ.ಕಲಂ ೩೧೩ ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಮಾಡಿದ್ದು, ಅದರಲ್ಲಿ ಆರೋಪಿಯು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿಯ ವಿರುದ್ಧವಾಗಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಈ ಪ್ರಕರಣದ ದೋಷಾರೋಪಣೆಯ ಆಧಾರದ ಮೇಲೆ ಈ ಕೆಳಕಂಡ ಅಂಶಗಳು

ತೀರ್ಮಾನವಾಗಲು ರಚಿಸಲಾಗಿರುತ್ತದೆ:-

1) ದಿನಾಂಕ:೨೦.೦೬.೨೦೧೯ ರಂದು ಬೆಳಿಗ್ಗೆ ೧೧.೪೫ ಗಂಟೆ ಸಮಯದಲ್ಲಿ ಚಳ್ಳಕೆರೆ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿರುವ ಚಳ್ಳಕೆರೆ ಪಟ್ಟಣದ ಬೆಂಗಳೂರು ರಸ್ತೆಯ ಜಾಮಿಯಾ ಕಾಂಪ್ಲೆಕ್ಸ್ ಮುಂಭಾಗದಲ್ಲಿ ಚಾಸಾ.೧ ರವರು ಹಿರಿಯೂರು ಕಡೆಯಿಂದ ಚಳ್ಳಕೆರೆ ಕಡೆಗೆ ಹಾದುಹೋಗಿರುವ ಎನ್.ಹೆಚ್.೧೫೦(ಎ) ರಸ್ತೆಯನ್ನು ದಾಟುತ್ತಿದ್ದಾಗ, ಆರೋಪಿಯು ಕೆಎ.೩೪/ಎಫ್.೧೩೦೦ ನೇ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಮನುಷ್ಯನ ಪ್ರಾಣಕ್ಕೆ ಅಪಾಯ ಉಂಟುಮಾಡುವ ಹಾಗೆ ಚಾಲನೆ ಮಾಡಿರುತ್ತಾರೆ. ಆ ಮೂಲಕ ಆರೋಪಿಯು ಭಾ.ದಂ.ಸಂ. ಕಲಂ ೨೭೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಭೀತುಪಡಿಸಿದ್ದಾರೆಯೇ?

2) ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯು ಕೆಎ.೩೪/ಎಫ್.೧೩೦೦ ನೇ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆ ದಾಟುತ್ತಿದ್ದ ಚಾಸಾ.೧ ರವರಿಗೆ ಡಿಕ್ಕಿಪಡಿಸಿದ್ದರಿಂದ ಚಾಸಾ.೧ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆದ್ದರಿಂದ ಆರೋಪಿಯು ಭಾ.ದಂ.ಸಂ. ಕಲಂ ೩೩೮ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಭೀತುಪಡಿಸಿದ್ದಾರೆಯೇ?

3) ಯಾವ ಆದೇಶ?

8. ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆ:-

ಅಂಶ ನಂ.1 : ನಕಾರಾತ್ಮಕವಾಗಿ

ಅಂಶ ನಂ.2 : ನಕಾರಾತ್ಮಕವಾಗಿ

ಅಂಶ ನಂ.3 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

: ಕಾರಣಗಳು :

9. ಅಂಶ ನಂ.೧ ಮತ್ತು ೨- ಈ ಅಂಶಗಳು ಒಂದನ್ನೊಂದು ಅವಲಂಭಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆಯ ಅವಶ್ಯಕತೆ

ಇದ್ದು, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನೆಯ ಪ್ರಕಾರ ಆರೋಪಿಯು ಅಜಾಗರೂಕತೆ ಮತ್ತು ನಿರ್ಲಕ್ಷ್ಯತೆಯಿಂದ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಚಾಲನೆ ಮಾಡಿ ಚಾಸಾ.೧ ರವರಿಗೆ ಡಿಕ್ಕಿಪಡಿಸಿದ್ದರಿಂದ ಚಾಸಾ.೧ ರವರು ತೀವ್ರವಾಗಿ ಗಾಯಗೊಂಡಿರುತ್ತಾರೆ ಎಂದು ಹೇಳಲಾಗಿದೆ.

11. ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ ೨೭೯ ರಡಿ ತಪ್ಪಿತಸ್ಥನೆಂದು ಸಾಭೀತುಪಡಿಸಲು ಆರೋಪಿಯು ಸಾರ್ವಜನಿಕ ರಸ್ತೆಯಲ್ಲಿ ವಾಹನವನ್ನು ದುಡುಕು ಅಥವಾ ನಿರ್ಲಕ್ಷ್ಯದಿಂದ ಮನುಷ್ಯನ ಜೀವ ಇತ್ಯಾದಿಗಳಿಗೆ ಅಪಾಯವುಂಟಾಗುವಂತೆ ಚಾಲನೆ ಮಾಡಿರುತ್ತಾನೆ ಎಂಬುದನ್ನು ಸಾಭೀತುಪಡಿಸಬೇಕು. ಹಾಗೆಯೇ ಭಾರತೀಯ ದಂಡ ಸಂಹಿತೆ ಕಲಂ ೩೩೮ ರಡಿ ತಪ್ಪಿತಸ್ಥನೆಂದು ಸಾಭೀತುಪಡಿಸಲು ಆರೋಪಿಯ ದುಡುಕು ಅಥವಾ ನಿರ್ಲಕ್ಷ್ಯತನದ ಕೃತ್ಯದಿಂದ ಚಾಸಾ.೧ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂಬುದನ್ನು ಸಾಭೀತುಪಡಿಸಬೇಕು. ಮೊದಲಿಗೆ ಕಲಂ ೨೭೯ ರಡಿಯಲ್ಲಿನ ಅಂಶಗಳನ್ನು ಸಾಭಿತುಪಡಿಸಿದರೆ ಅದಕ್ಕೆ ಪೂರಕವೆಂಬಂತೆ ಕೆಲವು ಸಂದರ್ಭಗಳ ರುಜುವಾತಿಗೆ ಒಳಪಟ್ಟು ಕಲಂ ೩೩೮ ಅಂಶವು ಸಾಭೀತಾಗುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ ಅಪಘಾತದಿಂದ ಚಾಸಾ.೧ ರವರು ತೀವ್ರವಾಗಿ ಗಾಯಗೊಂಡಿರುತ್ತಾರೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ಭಾರತೀಯ ದಂಡ ಸಂಹಿತೆ ಕಲಂ ೨೭೯ ರಡಿಯಲ್ಲಿ ಆರೋಪಿಯು ತಪ್ಪಿತಸ್ಥ ಎಂದು ತೀರ್ಮಾನಿಸಿದ್ದಲ್ಲಿ, ಅದಕ್ಕೆ ಪೂರಕವಾಗಿ ಕಲಂ ೩೩೮ ರಡಿ ಆರೋಪವು ಸಾಬೀತಾಗುತ್ತದೆ.

13. ದೋಷಾರೋಪಣೆಯನ್ನು ಸಾಭೀತುಪಡಿಸಲು ಈ ಪ್ರಕರಣದಲ್ಲಿ ಅಭಿಯೋಜನಾ ಪಕ್ಷದವರು ೦೫ ಜನ ಸಾಕ್ಷಿದಾರರನ್ನು ಪ್ರಾಸಾ-೧ ರಿಂದ ೫ ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ದೂರುದಾರರಾದ ಚಾಸಾ.೧ ರವರನ್ನು ಪ್ರಾಸಾ.೧ ಎಂದು, ಮಹಜರ್ ಸಾಕ್ಷಿದಾರರಾದ ಚಾಸಾ.೨ ಮತ್ತು ೩ ರವರನ್ನು ಕ್ರಮವಾಗಿ ಪ್ರಾಸಾ.೨ ಮತ್ತು ೩ ಎಂದು, ಪ್ರತ್ಯಕ್ಷ

ಸಾಕ್ಷಿದಾರರಾದ ಚಾಸಾ.೫ ರವರನ್ನು ಪ್ರಾಸಾ.೪ ಎಂದು, ತನಿಖಾಧಿಕಾರಿಯಾದ ಚಾಸಾ.೧೧ ರವರನ್ನು ಪ್ರಾಸಾ.೫ ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

14. ದೂರುದಾರರಾದ ಪ್ರಾಸಾ.೧ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ್ಗೆ ೫ ವರ್ಷಗಳ ಹಿಂದೆ ಚಳ್ಳಕೆರೆಗೆ ಬ್ಯಾಂಕಿಗೆ ಬಂದು ವಾಪಾಸ್ಸು ಹಿರಿಯೂರು ರಸ್ತೆಯಲ್ಲಿ ಚರಂಡಿ ಪಕ್ಕದಲ್ಲಿ ಹೋಗುತ್ತಿದ್ದಾಗ, ಸರ್ಕಾರಿ ಬಸ್ಸು ಹಿಂದಿನಿಂದ ಬಂದು ತನ್ನ ಎಡಭಾಗಕ್ಕೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಅಪಘಾತದಲ್ಲಿ ತನ್ನ ಎಡಭಾಗದ ಭುಜದ ಮೂಳೆಯು ಮುರಿದಿರುತ್ತದೆ, ತಲೆಗೆ ಪೆಟ್ಟುಗಳಾಗಿರುತ್ತವೆ, ಎಲ್ಲಾ ಹಲ್ಲುಗಳು ಮುರಿದುಹೋಗಿರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಬಸ್ಸನ್ನು ಚಾಲನೆ ಮಾಡುತ್ತಿದ್ದ ಚಾಲಕನ ಹೆಸರು ಹಾಗೂ ಬಸ್ಸಿನ ನೋಂದಣಿ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದಾಗ್ಯೂ ಸಾಕ್ಷಿಯು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿ ಆರೋಪಿಯ ತಪ್ಪಿನ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ.

15. ಮಹಜರ್ ಸಾಕ್ಷಿದಾರರಾದ ಪ್ರಾಸಾ.೨ ಮತ್ತು ೩ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ್ಗೆ ೫ ವರ್ಷಗಳ ಹಿಂದೆ ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಅಪಘಾತದ ವಿಚಾರವಾಗಿ ನಿಪಿ.೭–ಸ್ಥಳ ಪಂಚನಾಮೆ ಮತ್ತು ನಿಪಿ.೮–ವಾಹನ ಪರಿಶೀಲಿನಾ ಪಂಚನಾಮೆಗೆ ಸಹಿ ಮಾಡಿದ್ದಾಗಿ, ಆಗ ತನ್ನ ಸಮಕ್ಷಮದಲ್ಲಿ ಯಾವುದೇ ವಾಹನಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸಾಕ್ಷಿಯು ಅವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುವುದನ್ನು ಮತ್ತು ವಾಹನಗಳನ್ನು ಜಪ್ತುಪಡಿಸಿಕೊಂಡಿರುವುದನ್ನು ಅಲ್ಲಗಳೆದಿರುತ್ತಾರೆ.

16. ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.೪ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಈಗ್ಗೆ ೫ ವರ್ಷಗಳ ಹಿಂದೆ ಸುಮಾರು ಮದ್ಯಾಹ್ನ ೧೨.೦೦ ಗಂಟೆಗೆ ಆಸ್ಪತ್ರೆಯವರು ಚಾಸಾ.೧ ರವರಿಗೆ ಅಪಘಾತವಾಗಿರುವ ವಿಚಾರವನ್ನು ದೂರವಾಣಿ ಕರೆ ಮಾಡಿ ತಿಳಿಸಿದ್ದರಿಂದ ಆಸ್ಪತ್ರೆಗೆ ಹೋಗಿ ನೋಡಿದಾಗ, ಚಾಸಾ.೧ ರವರು ಮಾತನಾಡುವ ಸ್ಥಿರಿಯಲ್ಲಿ ಇರಲಿಲ್ಲ ಮತ್ತು ಅವರ ಬಾಯಿಗೆ, ತಲೆಗೆ ಹಾಗೂ ಎಡಗೈಗೆ ಪೆಟ್ಟುಗಳಾಗಿದ್ದವು ಎಂದು ನುಡಿಯುತ್ತಾರೆ. ಸಾಕ್ಷಿಯು ಕೆ.ಎಸ್.ಆರ್.ಟಿ.ಸಿ. ಬಸ್ ಡಿಕ್ಕಿಪಡಿಸಿದ್ದರಿಂದ ಅಪಘಾತ ಸಂಭವಿಸಿರುತ್ತದೆ ಎಂದು ತಿಳಿದಿರುತ್ತದೆ, ಸ್ಥಳವನ್ನು ನಿಖರವಾಗಿ ಹೇಳಲು ಆಗುವುದಿಲ್ಲ, ಅಪಘಾತಪಡಿಸಿದ ಚಾಲಕನ ಹೆಸರು ಮತ್ತು ಬಸ್ಸಿನ ನೊಂದಣಿ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಪೋಲೀಸರು ತನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ ಮತ್ತು ತನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಪೋಲೀಸರು ತನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಮತ್ತು ನಿಪಿ.೭-ಸ್ಥಳ ಪಂಚನಾಮೆ ಮತ್ತು ನಿಪಿ.೮-ವಾಹನ ಅಮಾನತ್ತು ಪಂಚನಾಮೆಗೆ ಸಹಿ ಮಾಡುವಾಗ ಯಾವುದೇ ವಾಹನಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದೆ ಆರೋಪಿಯ ವಿರುದ್ಧದ ಆಪಾದನೆಯನ್ನು ಅಲ್ಲಗಳೆದು ಪ್ರಕರಣಕ್ಕೆ ವ್ಯತಿರಿಕ್ತವಾಗಿ ನುಡಿದಿರುತ್ತಾರೆ.

17. ತನಿಖಾಧಿಕಾರಿಯಾದ ಪ್ರಾಸಾ.೫ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿನಾಂಕ ೨೦.೦೬.೨೦೧೯ ರಂದು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಬೇಟಿ ಮಾಡಿ ಚಾಸಾ.೧ ರವರನ್ನು ವಿಚಾರಣೆ ಮಾಡಿದ್ದು, ಚಾಸಾ.೧ ರವರು ಅಪಘಾತಕ್ಕೆ ಸಂಬಂಧಿಸಿದಂತೆ ತನ್ನ ಗಂಡನನ್ನು ಸಂಪರ್ಕಿಸಿ ದೂರು ನೀಡುವುದಾಗಿ ತಿಳಿಸಿದ್ದು, ನಂತರ ಪುನಃ ಮದ್ಯಾಹ್ನ ೩.೦೦ ಗಂಟೆಗೆ ಆಸ್ಪತ್ರೆಗೆ ಹೋಗಿ ಚಾಸಾ.೧ ರವರು ನಿಡಿದ ಹೇಳಿಕೆ ದೂರನ್ನು ಪಡೆದು, ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಅದೇ ದಿನ ಅಪಘಾತ ನಡೆದ ಸ್ಥಳಕ್ಕೆ

ಬೇಟಿ ನೀಡಿ, ಸ್ಥಳ ಪಂಚನಾಮೆ ಜರುಗಿಸಿ, ನಂತರ ಚಳ್ಳಕೆರೆ ಠಾಣಾ ಆವರಣದಲ್ಲಿದ್ದ ಕೆಎ.೩೪/ಎಫ್.೧೩೦೦ ನೇ ಕೆ.ಎಸ್.ಆರ್.ಟಿ.ಸಿ. ಬಸ್‌ಗೆ ಸಂಬಂಧಿಸಿದಂತೆ ವಾಹನ ಪರಿಶೀಲನಾ ಪಂಚನಾಮೆ ಜರುಗಿಸಿ, ಬಸ್ಸನ್ನು ಜಪ್ತುಪಡಿಸಿಕೊಂಡು, ಚಾಸಾ.೪ ರಿಂದ ೬ ರವರ ಹೇಳಿಕೆಗಳನ್ನು ಪಡೆದು, ಆರ್.ಟಿ.ಓ. ಕಛೇರಿಯಿಂದ ಅಪಘಾತಪಡಿಸಿದ ವಾಹನದ ಐ.ಎಂ.ವಿ. ವರದಿಯನ್ನು ಪಡೆದು, ನಂತರ ಬಸ್ಸಿಗೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಇಂಡಿಮ್ನಿಟಿ ಬಾಂಡ್ ಪಡೆದು ಬಸ್ಸನ್ನು ಚಾಸಾ.೬ ರವರ ಮದ್ಯಂತರ ವಶಕ್ಕೆ ನೀಡಿ, ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದು, ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ.

18. ಪ್ರಸ್ತುತ ಪ್ರಕರಣದಲ್ಲಿ, ಪ್ರಾಸಾ.೧ ರವರು ದೂರುದಾರರು ಹಾಗೂ ನೊಂದ ಸಾಕ್ಷಿಯಾಗಿರುತ್ತಾರೆ. ಅವರು ನಿಪಿ.೧ ದೂರಿನಲ್ಲಿ ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಚಾಲನೆ ಮಾಡಿ ಡಿಕ್ಕಿಪಡಿಸಿ, ನಂತರ ತನ್ನನ್ನು ಆಸ್ಪತ್ರೆಗೆ ಕರೆದೊಯ್ದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರಾಸಾ.೧ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಆರೋಪಿ ಹಾಗೂ ಬಸ್ಸಿನ ನೊಂದಣಿ ಸಂಖ್ಯೆ ಗೊತ್ತಿಲ್ಲ ಎಂದು ಹಾಗೂ ಆರೋಪಿಯನ್ನು ಈ ಹಿಂದೆ ನೋಡಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಅಭಿಯೋಜನೆಯವರು ಪ್ರಾಸಾ.೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಆರೋಪಿಯ ಅಜಾಗರೂಕತೆಯ ಬಗ್ಗೆಯಾಗಲೀ, ಅಪಘಾತಕ್ಕೊಳಗಾದ ವಾಹನದ ಬಗ್ಗೆಯಾಗಲೀ ಸಾಕ್ಷ್ಯ ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾದ ಪ್ರಾಸಾ.೪ ರವರು ಸಹ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಅಲ್ಲದೆ ಪ್ರಾಸಾ.೧ ರವರು ನಿಪಿ.೧–ದೂರಿನಲ್ಲಿ ತಾನು ರಸ್ತೆ ದಾಟುತ್ತಿದ್ದಾಗ ಅಪಘಾತವಾಗಿರುತ್ತದೆ ಎಂದು ನುಡಿದಿದ್ದು, ಇದಕ್ಕೆ ವ್ಯತಿರಿಕ್ತವಾಗಿ ತನ್ನ ಮುಖ್ಯ ವಿಚಾರಣೆಯಲ್ಲಿ ತಾನು ರಸ್ತೆಯ ಚರಂಡಿ ಪಕ್ಕದಲ್ಲಿ ಹೋಗುತ್ತಿದ್ದಾಗ ಸರ್ಕಾರಿ ಬಸ್ಸು ಹಿಂದಿನಿಂದ ಬಂದು ತನ್ನ ಎಡಭಾಗಕ್ಕೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಇದರಿಂದ ಪ್ರಾಸಾ.೧ ರವರ ಹೇಳಿಕೆಗಳಲ್ಲಿ

ಸ್ಥಿರತೆ ಇರುವುದಿಲ್ಲ ಹಾಗೂ ಅವರ ಹೇಳಿಕೆಗಳಲ್ಲಿ ಆರೋಪಿಯ ಅಜಾಗರೂಕತೆಯ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಅಲ್ಲದೆ ಪ್ರಾಸಾ.೧ ರವರು ಸಂಚಾರಿ ನಿಯಮವನ್ನು ಪಾಲಿಸಿ ಸರಿಯಾದ ರೀತಿಯಲ್ಲಿ ರಸ್ತೆಯನ್ನು ದಾಟುತ್ತಿದ್ದರು ಎಂದು ತೋರಿಸಲು ಯಾವುದೇ ಸ್ಪಷ್ಟ ಸಾಕ್ಷ್ಯಗಳು ಲಭ್ಯವಿರುವುದಿಲ್ಲ. ಹಾಗಾಗಿ, ಬಸ್ಸಿನ ಚಾಲಕನ ಅತೀವೇಗ ಮತ್ತು ಅಜಾಗರೂಕತೆಯಿಂದ ಅಪಘಾತ ಸಂಭವಿಸಿರುತ್ತದೆ ಎಂಬುವುದನ್ನು ನಿರ್ಣಯಿಸಲಾಗುವುದಿಲ್ಲ.

19. ಈ ಪ್ರಕರಣದಲ್ಲಿ, ಪ್ರಮುಖ ಸಾಕ್ಷಿದಾರರಾದ ದೂರುದಾರರು, ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಮಹಜರ್ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದೇ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ. ಸ್ಥಳ ಹಾಗೂ ವಾಹನ ಪರಿಶೀಲನಾ ಪಂಚನಾಮೆಯ ಸಾಕ್ಷಿದಾರರಾದ ಪ್ರಾಸಾ.೨ ಮತ್ತು ೩ ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ, ಅಭಿಯೋಜನೆಯವರು ನಿ.ಪಿ.೭ ರಂತೆ ಸ್ಥಳ ಮಹಜರ್ ಮತ್ತು ನಿಪಿ.೮ ರಂತೆ ವಾಹನ ಪರಿಶೀಲನಾ ಪಂಚನಾಮೆಯನ್ನು ಜರುಗಿಸಿರುವುದನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ನೊಂದ ಮತ್ತು ಪ್ರತ್ಯಕ್ಷ ಸಾಕ್ಷಿಗಳು, ಆರೋಪಿಯನ್ನು ಗುರುತಿಸಿರುವುದಿಲ್ಲ. ಪ್ರತ್ಯಕ್ಷ ಸಾಕ್ಷಿದಾರರು ಯಾರ ತಪ್ಪಿನಿಂದ ಅಪಘಾತ ಸಂಭವಿಸಿರುತ್ತದೆ ಎಂದು ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುವುದು ಅಭಿಯೋಜನೆಯ ಪ್ರಕರಣಕ್ಕೆ ಮಾರಕವಾಗಿದೆ. ಅಪಘಾತವು ಆರೋಪಿಯ ಅಜಾಗರೂಕತೆ ಅಥವಾ ನಿರ್ಲಕ್ಷ್ಯ ಚಾಲನೆಯಿಂದಲೇ ಸಂಭವಿಸಿದೇ ಎಂಬುದನ್ನು ಸಾಬೀತುಪಡಿಸುವ ಯಾವುದೇ ನಂಬಲರ್ಹ ಹಾಗೂ ಸ್ವತಂತ್ರ ಸಾಕ್ಷ್ಯ ನ್ಯಾಯಾಲಯದ ಮುಂದೆ ಲಭ್ಯವಿಲ್ಲ.

20. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ದಾಖಲಾಗಿರುತ್ತದೆ. ಪ್ರಮುಖ ಸಾಕ್ಷಿದಾರರು ಪ್ರಕರಣವನ್ನು ಬೆಂಬಲಿಸದ ಸಂದರ್ಭದಲ್ಲಿ, ಕೇವಲ ತನಿಖಾಧಿಕಾರಿಯ ಸಾಕ್ಷ್ಯದ ಆಧಾರದ ಮೇಲೆ ಆರೋಪಿತನ ವಿರುದ್ಧ ದೋಷಾರೋಪಣೆಯನ್ನು ಸಾಬೀತುಪಡಿಸಲು ಸಾಧ್ಯವಿಲ್ಲ. ಅಪಘಾತದ ಪ್ರಕರಣಗಳಲ್ಲಿ

ಆರೋಪಿತನ ತಪ್ಪನ್ನು ಸಾಬೀತುಪಡಿಸಲು ಅತಿವೇಗ ಅಥವಾ ನಿರ್ಲಕ್ಷ್ಯ ಚಾಲನೆಯ ಬಗ್ಗೆ ಸ್ಪಷ್ಟ, ನಂಬಲಾರ್ಹ ಹಾಗೂ ಸ್ವತಂತ್ರ ಸಾಕ್ಷ್ಯಗಳ ಅಗತ್ಯವಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಂತಹ ಸಾಕ್ಷ್ಯಗಳ ಕೊರತೆ ಸ್ಪಷ್ಟವಾಗಿದೆ. ಆ ಕಾರಣ ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಲಾದ ಆಪಾದನೆಗಳನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಲಭ್ಯವಿರುವ ದಾಖಲೆಗಳ ಪ್ರಕಾರ ಅಪಘಾತದಿಂದ ಅಂಬುಜಮ್ಮ ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುವುದು ಕಂಡುಬಂದರೂ, ಸದರಿ ಅಪಘಾತವು ಆರೋಪಿಯ ದುಡುಕು ಅಥವಾ ನಿರ್ಲಕ್ಷ್ಯತನದಿಂದ ಸಂಭವಿಸಿರುತ್ತದೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂಬ ತೀರ್ಮಾನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭ ಆರೋಪಿತನಿಗೆ ನೀಡಬೇಕೆಂದು ಇರುತ್ತದೆ. ಈ ಕಾರಣಗಳಿಂದಾಗಿ ಅಂಶ ೧ ಮತ್ತು ೨ ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

21. <u>ಅಂಶ ನಂ.೩:-</u> ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ:-

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ ೨೫೫(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ ೨೭೯ ಮತ್ತು ೩೩೮ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ ೪೩೭(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ಮತ್ತು

ಜಾಮೀನುದಾರರ ಜಾಮೀನು ಮುಚ್ಚಳಿಕೆಯು ೬ ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿಸಿ, ಸಹಿ ಮಾಡಿ ಇಂದು ಅಂದರೆ ದಿನಾಂಕ 27 ನೇ ಮೇ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ಅನುಬಂಧ:-

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು:-

| | |
|---|---|
| ಪ್ರಾಸಾ-೧ | : ಅಂಬುಜಮ್ಮ |
| ಪ್ರಾಸಾ-೨ | : ರಾಜಶೇಖರ |
| ಪ್ರಾಸಾ-೩ | : ಕಾಂತರಾಜ |
| ಪ್ರಾಸಾ-೪ | : ತಿಪ್ಪೇಸ್ವಾಮಿ |
| ಪ್ರಾಸಾ-೫ | : ಜಿ.ಮಂಜುನಾಥ |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳು:-

| | |
|---|---|
| ನಿಪಿ-೧ | : ದೂರು |
| ನಿಪಿ-೧(ಎ & ಬಿ) | : ಸಾಕ್ಷಿ ಸಹಿ |
| ನಿಪಿ-೨ | : ಪ್ರಾಸಾ.೧ ರವರ ಮರುಹೇಳಿಕೆ |
| ನಿಪಿ-೩ | : ಐ.ಎಂ.ವಿ. ವರದಿ |
| ನಿಪಿ-೩(ಎ) | : ಸಾಕ್ಷಿ ಸಹಿ |
| ನಿಪಿ-೪ | : ಗಾಯದ ಪ್ರಮಾಣ ಪತ್ರ |
| ನಿಪಿ-೪(ಎ) | : ಸಾಕ್ಷಿ ಸಹಿ |
| ನಿಪಿ-೫ | : ಇಂಡಿಮ್ನಿಟಿ ಬಾಂಡ್ |
| ನಿಪಿ-೫(ಎ) | : ಸಾಕ್ಷಿ ಸಹಿ |
| ನಿಪಿ-೬ | : ಸಾರಿಗೆ ಸಂಸ್ಥೆಯ ದೃಢೀಕರಣ ಪತ್ರ |
| ನಿಪಿ-೭ | : ಕೃತ್ಯ ನಡೆದ ಸ್ಥಳ ಪಂಚನಾಮೆ |
| ನಿಪಿ-೭(ಎ ರಿಂದ ಡಿ) | : ಸಾಕ್ಷಿ ಸಹಿ |
| ನಿಪಿ-೮ | : ವಾಹನ ಪರಿಶೀಲನಾ ಪಂಚನಾಮೆ |
| ನಿಪಿ-೮(ಎ ರಿಂದ ಡಿ) | : ಸಾಕ್ಷಿ ಸಹಿ |
| ನಿಪಿ-೯ | : ಸಾಕ್ಷಿ ಹೇಳಿಕೆ |
| ನಿಪಿ-೧೦ | : ಪ್ರಥಮ ವರ್ತಮಾನ ವರದಿ |
| ನಿಪಿ-೧೦(ಎ) | : ಸಾಕ್ಷಿ ಸಹಿ |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲು:

–: ಇಲ್ಲ :–

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾದ ದಾಖಲಾತಿಗಳು:

–: ಇಲ್ಲ :–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.